# ಅಲಯನ್ಸ್‌ನಲ್ಲಿ ಕನ್ನಡ ಕಲರವ



**ಆನೇಕಲ್:** ಕನ್ನಡ ಕಲಿಸಿ, ನಾಡು-ನುಡಿ ಉಳಿಸುವ ಧ್ಯೇಯ ವಾಕ್ಯದೊಂದಿಗೆ ಅಲಯನ್ಸ್ ನವೆಂಬರ್ ತಿಂಗಳ ಪೂರ್ತಿ ಕನ್ನಡ ಕಾರ್ಯಕ್ರಮ ಹಮ್ಮಿಕೊಂಡು ತಾಯಿ ಭುವನೇಶ್ವರಿಯ ಸೇವೆ ಮಾಡಲು ಬದ್ಧವಾಗಿದೆ ಎಂದು ಅಲಯನ್ಸ್ ಸಹ ಕುಲಾಧಿಪತಿ ಅಜಯ್ ಜಿ. ಛಬ್ಬಿ ಹೇಳಿದರು.

ನಗರದ ಅಲಯನ್ಸ್ ಕ್ಯಾಂಪಸ್‌ನಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಅಲಯನ್ಸ್ ಆವರಣದಲ್ಲಿ ಲಕ್ಷಾಂತರ ಗಿಡ-ಮರಗಳ ಜೊತೆಗೆ ದೇಶ-ವಿದೇಶಗಳ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಸಹಸ್ರಾರು ಕನ್ನಡೇತರರಿದ್ದಾರೆ. ಅವರೆಲ್ಲರಿಗೂ ಪ್ರೀತಿಯಿಂದ ಕನ್ನಡವನ್ನು ಕಲಿಸಿ ಕನ್ನಡದ ಅಸ್ಮಿತೆ, ಸಾರ್ವಭೌಮತೆ ಬಗ್ಗೆ ಅರಿವು ಮೂಡಿಸಿ ಕನ್ನಡ ಮಾತನಾಡಲು ಪ್ರೇರೇಪಿಸಲಾಗುವುದು ಎಂದರು.

ಸಮ ಕುಲಾಧಿಪತಿ ಡಾ. ಪುನೀತ್ ಕಾರಿಯಪ್ಪ ಮಾತನಾಡಿ, ಅಲಯನ್ಸ್ ವಿಶ್ವಮಟ್ಟದ ಹಲವು ಕೋರ್ಸ್‌ಗಳನ್ನು ಸೃಷ್ಟಿ ಅಂತಾರಾಷ್ಟ್ರೀಯ ದರ್ಜೆಯ ಶಿಕ್ಷಣ ನೀಡುವ ಮೂಲಕ ಪ್ರಸಿದ್ಧಿಯಾಗಿದೆ. ಸ್ಥಳೀಯ ಪ್ರದೇಶದ ಅಭಿವೃದ್ಧಿಗಾಗಿ ಕೆಲವು ಯೋಜನೆ ಸಿದ್ಧಪಡಿಸಿ ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿಗಾಗಿ ಕೌಶಲ್ಯ ನೀಡುತ್ತಿದೆ ಎಂದರು. ಬೋಧಕ ಸಿಬ್ಬಂದಿ ಡಾ.ಚಿತ್ರಾಕರ ಹೆಗಡೆ ರಚಿತ 'ಬಿಗಿನರ್ಸ್ ಫೊರೆನ್ಸಿ ಸೈನ್ಸ್' ಹಾಗೂ ಡಾ. ಶೇಖರ್, ರಾಘವೇಂದ್ರ ರಚಿತ 'ದ್ವೈತ ಪತ್ತೆದಾರಿ' ಕಾದಂಬರಿ ಬಿಡುಗಡೆ ಮಾಡಲಾಯಿತು. ಶಾಂಭವಿ ತಂಡದಿಂದ ಸಮ್ಮಿಲನ, ಸತ್ಯೇಶ್ ಬೆಳ್ಳೂರು ಮತ್ತು ಡಾ.ಆರತಿ ಅವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಆಡಳಿತ ಮಂಡಳಿಯ ಶೈಲಜಾ ಛಬ್ಬಿ, ಡಾ. ಸುರೇಖ, ಡಾ. ನಿವೇದಿತ ಮಿಶ್ರಾ, ಹಾಗೂ ಇತರರಿದ್ದರು.